**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಕೊಡಗು-ಮಡಿಕೇರಿ**

**<u>ಎಸ್.ಸಿ ಸಂಖ್ಯೆಃ 78/2023</u>**

ಪ್ರಾಸಾಃ 6
ಚಾಸಾಃ**5**

ಸಾಕ್ಷಿದಾರರ ಹೆಸರು: ಅಶ್ವಿತ

ಗಂಡನ ಹೆಸರು : ಮುರುಗೇಶ್

ವಯಸ್ಸು : 26 ವರ್ಷ

ವೃತ್ತಿ : ಕೂಲಿ ಕೆಲಸ

ವಾಸ : ನಾಕಲಗೂಡು ಗ್ರಾಮ.

**ಸಾಕ್ಷಿಯನ್ನು ದಿನಾಂಕ 08-04-2025 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**<u>ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>**

1. ಆರೋಪಿಗಳ ಪರಿಚಯ ಇದೆ. ಚಾಸಾ-1, ಪ್ರಾಸಾ-4, ಪ್ರಾಸಾ-5, ಪ್ರಾಸಾ-1 ರವರ ಪರಿಚಯ ಇದೆ.

2. ಪ್ರಾಸಾ-4 ರವರು ನಮ್ಮ ಮನೆಯ ಪಕ್ಕದ ಪೈಸಾರಿ ಜಾಗದಲ್ಲಿ 8 ವರ್ಷಗಳ ಮೊದಲೇ ಬೇಲಿ ಹಾಕಿಕೊಂಡು ಸ್ವಾಧೀನದಲ್ಲಿ ಇದ್ದು, ಇತ್ತೀಚೆಗೆ ಅದರಲ್ಲಿ ಶೀಟಿನ ಮನೆಯನ್ನು ನಿರ್ಮಿಸಿದ್ದರು. ಪ್ರಾಸಾ-5 ಸದರಿ ಮನೆಯಲ್ಲಿ ಚಾಸಾ-1 ಹಾಗೂ ಪ್ರಾಸಾ-4 ರವರನ್ನು ವಾಸಿಸಲು ಬಿಟ್ಟಿದ್ದರು.

3. ದಿನಾಂಕ 18-07-2022 ರಂದು ಬೆಳಿಗ್ಗೆ 7.30 ಗಂಟೆಗೆ ನಾನು ನನ್ನ ಮನೆಯಲ್ಲಿ ಇದ್ದಾಗ ಪಕ್ಕದ ಪ್ರಾಸಾ-5 ರವರ ಮನೆಯಲ್ಲಿ ಕೂಗಾಡುವ ಶಬ್ದ ಕೇಳಿ ನಾನು ಅಲ್ಲಿಗೆ ಹೋದಾಗ ಆರೋಪಿಗಳು ಪ್ರಾಸಾ--4 ರವರ ಮನೆಯ ಒಳಗಡೆ ಇದ್ದು, ಚಾಸಾ-1 ರವರಿಗೆ ದೊಣ್ಣೆಯಿಂದ ಹೊಡೆದು ಅವರ

ಕುತ್ತಿಗೆಯನ್ನು ಹಿಡಿದು ಹಿಸುಕಿದ್ದರು. ಆ ಬಳಿಕ 1 ನೇ ಆರೋಪಿ ಪ್ರಾಸಾ-4 ರವರ ಕಿಸೆಯಿಂದ ಏನನ್ನೋ ತೆಗೆದುಕೊಂಡು ಹೋದರು. ನಾನು ಪ್ರಾಸಾ-4 ರವರನ್ನು ವಿಚಾರಿಸಿದಾಗ ಆತ 1 ನೇ ಆರೋಪಿ ತನ್ನ ಕಿಸೆಯಲ್ಲಿ ಇದ್ದ 25,000/- ರೂಪಾಯಿಗಳನ್ನು ಕಸಿದುಕೊಂಡು ಹೋಗಿದ್ದಾರೆ ಎಂದು ತಿಳಿಸಿದ್ದರು. ಮುಂದುವರೆದು ಆರೋಪಿಗಳು ಚಾಸಾ-1 ಹಾಗೂ ಪ್ರಾಸಾ-4 ರವರಿಗೆ ಕೊಲೆ ಮಾಡುತ್ತೇವೆ ಎಂದು ಬೆದರಿಕೆ ಹಾಕಿದ್ದರು.  ಚಾಸಾ-1 ಮಾರನೇ ದಿನ ಪೊಲೀಸ್ ದೂರು ನೀಡಿದ್ದು, ಈ ಬಗ್ಗೆ ಪ್ರಕರಣ ದಾಖಲಾಗಿದೆ. ಆರೋಪಿ ಚಾಸಾ-1 ರವರ ಮೇಲೆ ಹಲ್ಲೆ ಮಾಡಲು ಉಪಯೋಗಿಸಿದ್ದ ದೊಣ್ಣೆಯನ್ನು ನೋಡಿದರೆ ಗುರುತಿಸುತ್ತೇನೆ,  ಅದನ್ನು ಈಗಾಗಲೇ ಮು.ಮಾ-1 ಎಂದು ಗುರುತಿಸಲಾಯಿತು. ಆರೋಪಿಗಳು ನ್ಯಾಯಾಲಯದ ಎದುರು ಉಪಸ್ಥಿತರು ಇದ್ದು ಅವರನ್ನು ಗುರುತಿಸಿರುತ್ತಾರೆ. 1, 5, 6 ಹಾಗೂ 7 ನೇ ಆರೋಪಿಗಳು ಈ ದಿನ ನ್ಯಾಯಾಲಯದಲ್ಲಿ ಗೈರು ಹಾಜರಾಗಿದ್ದು, ಅವರನ್ನು ಗುರುತಿಸಲು ಆರೋಪಿ ಪರ ವಕೀಲರು ತಕರಾರು ಇಲ್ಲದ ಕಾರಣ ಗುರುತಿಸಲಾಗಿದೆ ಎಂದು ತೆಗೆದುಕೊಳ್ಳಲಾಯಿತು.

**ಪಾಟೀಸವಾಲು- 1 ರಿಂದ 4 ನೇ ಆರೋಪಿತರ ಪರವಾಗಿ ಶ್ರೀ ಸಿ.ಎಸ್.ಪಿ. ವಕೀಲರಿಂದಃ**

ಪ್ರತಿ ಪ್ರಕರಣ ಇದ್ದ ಕಾರಣ ಪಾಟೀಸವಾಲಿಗೆ ಮುಂದೂಡಲಾಯಿತು

**ಪಾಟೀಸವಾಲು- 5 ನೇ ಆರೋಪಿತರ ಪರವಾಗಿ ಶ್ರೀ ಪಿ.ಕೆ.ಎಂ. ವಕೀಲರಿಂದಃ**

ಪ್ರತಿ ಪ್ರಕರಣ ಇದ್ದ ಕಾರಣ ಪಾಟೀಸವಾಲಿಗೆ ಮುಂದೂಡಲಾಯಿತು

**ಪಾಟೀಸವಾಲು- 6 ಮತ್ತು 7 ನೇ ಆರೋಪಿತರ ಪರವಾಗಿ ಶ್ರೀ ಡಿ.ಡಿ.ಸಿ ವಕೀಲರಿಂದಃ**

ಪ್ರತಿ ಪ್ರಕರಣ ಇದ್ದ ಕಾರಣ ಪಾಟೀಸವಾಲಿಗೆ  ಮುಂದೂಡಲಾಯಿತು

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-xxx

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು-ಮಡಿಕೇರಿ